# 11-AUG 2023 State Level Seminar On Daily News Paper

ಕನ್ನಡಪ್ರಭ

## ಪರಿಶ್ರಮ, ಆತ್ಮವಿಶ್ವಾಸವೇ ಸಾಧನೆಗೆ ಸಾಧನ

• **ಕನ್ನಡಪ್ರಭ ವಾರ್ತೆ** ಬಾದಾಮಿ

ಇವತ್ತಿನ ಸ್ಪರ್ಧಾತ್ಮಕ ಜೀವನದಲ್ಲಿ ಪರಿಶ್ರಮ ಮತ್ತು ಆತ್ಮವಿಶ್ವಾಸವಿದ್ದರೆ ಮಾತ್ರ ಮುಂದೆ ಬರಲು ಸಾಧ್ಯ. ಕೆಲಸವನ್ನು ಹುಡುಕಿಕೊಂಡು ನಾವು ಹೋಗಬಾರದು, ಕೆಲಸವೇ ನಮ್ಮನ್ನು ಹುಡುಕಿಕೊಂಡು ಬರಬೇಕು. ಆ ನಿಟ್ಟಿನಲ್ಲಿ ಅಭ್ಯಾಸ, ಪರಿಶ್ರಮ ವಹಿಸಿದಾಗ ಮಾತ್ರ ಸಾಧನೆ ಮಾಡಲು ಸಾಧ್ಯವೆಂದು ಸಂಸ್ಥೆ ನಿರ್ದೇಶಕ ಜೈದೇವ ಮಮದಾಪೂರ ಹೇಳಿದರು.

ಗುರುವಾರ, ಇಲ್ಲಿನ ಎಸ್‌ಬಿಎಂ ಪದವಿ ಕಾಲೇಜಿನಲ್ಲಿ ಜರುಗಿದ ರಸಾಯನ ಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಕನ್ನಡ ವಿಷಯ ಕುರಿತು ಏರ್ಪಡಿಸಿದ್ದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಪ್ರತಿ ವರ್ಷ 80ರಿಂದ 90 ಲಕ್ಷ ವಿದ್ಯಾರ್ಥಿಗಳು ಪದವಿ ಪಡೆದು ಹೊರಗೆ ಬರುತ್ತಿದ್ದು, ಅವರಲ್ಲಿ 8 ರಿಂದ 9 ಲಕ್ಷ ಜನರಿಗೆ ಮಾತ್ರ ಉದ್ಯೋಗ ಲಭಿಸುತ್ತಿದೆ ಎಂದು ಹೇಳಿದರು.

ಶೇ.90ರಷ್ಟು ಪದವೀಧರರು ನಿರುದ್ಯೋಗಿಗಳಾಗಿ ಬದುಕು ಕಟ್ಟಿಕೊಳ್ಳಲು ಹರಸಾಹಸ ಮಾಡಬೇಕಾದಂತಹ ಪರಿಸ್ಥಿತಿ ಇಂದಿದೆ. ಹಾಗಾಗಿ ಸ್ಪರ್ಧಾತ್ಮಕ ದಿನದಲ್ಲಿ ಪರಿಶ್ರಮ, ಅಧ್ಯಯನ, ಅಭ್ಯಾಸ ರೂಢಿಸಿಕೊಂಡರೆ ಭವಿಷ್ಯ ಉತ್ತಮವಾಗಿರುತ್ತದೆ ಎಂದು ಸಲಹೆ ನೀಡಿದರು.



ಬಾದಾಮಿಯ ಎಸ್‌ಬಿಎಂ ಪದವಿ ಕಾಲೇಜಿನಲ್ಲಿ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಜೈದೇವ ಮಮದಾಪೂರ ಉದ್ಘಾಟಿಸಿದರು.

ಸಮಾರಂಭದಲ್ಲಿ ಬಾಗಲಕೋಟೆಯ ಡಾ.ರುದ್ರೇಶ ಡಿ.ಎಲ್., ಜಮಖಂಡಿಯ ಡಾ.ವಿನಾಯಕ ಕುಲಕರ್ಣಿ, ಬೆಳಗಾವಿಯ ಡಾ.ಉಮೇಶ ದೇಶನ್ನವರ, ಜಾನಪದ ಸಂಶೋಧಕ ಡಾ.ಪ್ರಕಾಸ ಕಾಡೆ ವಿಷಯ ಮಂಡಿಸಿದರು. ಪ್ರಾಚಾರ್ಯ ರವೀಂದ್ರ ಮೂಲಿಮನಿ ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಮುಖ್ಯಸ್ಥರಾದ ಎಸ್.ಎನ್.ಬೇನಾಳ, ಡಾ.ಎ.ಎ.ತೋಪ್ಪಲಕಟ್ಟಿ, ಡಾ.ರಾಜಶೇಖರ ಬಸುಪಟ್ಟದ, ಪಿ.ಎಸ್.ಚನಗೊಂಡ ಉಪಸ್ಥಿತರಿದ್ದರು.

ವಿಜ್ಞಾನಿಗಳ ವಿಭಿನ್ನ ಸಾಧನೆಗಳು ಪ್ರಾಧ್ಯಾಪಕ ಶಿವುಕುಮಾರ ಅಂಗಡಿ ಕೃತಿಗಳನ್ನ ಪರಿಚಯಿಸಿದರು. ಪ್ರಾಚಾರ್ಯ ರವೀಂದ್ರ ಮೂಲಿಮನಿ, ಪ್ರಾಸ್ತಾವಿಕ ಮಾತನಾಡಿದರು. ಸಹ ಪ್ರಾಧ್ಯಾಪಕ ಶಿವುಕುಮಾರ ಅಂಗಡಿ ನಿರೂಪಿಸಿದರು. ಎನ್.ಬಿ.ಸೋಮನಕಟ್ಟಿ ವಂದಿಸಿದರು. ಪ್ರಾಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

BAGALKOTE Edition
Aug 11, 2023 Page No. 03
Powered by : eReleGo.com

In the above News **Paper Perseverance and Self-confidence arethe key to toSuccess** Saidby ShriJayadev Mamadapur(Director SSBM College Badami)In today's competitive life we can get ahead only if we have perseverance and self-confidence. we should not go looking for work, work should come looking for us. On Thursday One day while inaugurating a one day state level seminar on Chemistry he said that every year 80to 90 Lakhs students are getting Degree Certificate but only 9Lakhs get job opportunities but remaining graduates have struggle to make a living Professor Shivakumar introduced shop works. Principal Ravindra Mulimani gave the introductory speech. Associate Professor Shivakumar Angadi narrated.Shri. N.B. Somanakatti presided. Saluted The faculty And students participated

I.Q.A.C Coordinator
S.S.B.M College
Badami-587 201

S.S.B.M.A.C. College ★ Badami ★ I.Q.A.C.

**Principal**
**S.S.B.M. Arts, Commerce & Science College, Badami**